		ಕರೆದು ಗುತ್ತಿಗೆದಾರರನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯನ್ನು ಶೀಘ್ರ ಪ್ರಾರಂಭಿಸಲಾಗುವುದು.
ಈ)	ಬಂದರು ವಿಕೇಂದ್ರಿಕರಣ ಅಭಿವೃದ್ದಿ ದೃಷ್ಟಿಯಿಂದ ಮಾರಕವಾಗಿದ್ದು. ಎಷ್ಟು ಫಲಾನುಭವಿಗಳಿಗೆ ಇದರ ಪ್ರಯೋಜನ ದೊರೆತಂತಾಗುವುದು?	ಬಂದರು ವಿಕೇಂದ್ರಿಕರಣ ಅಭಿವೃದ್ದಿ ದೃಷ್ಟಿಯಿಂದ ಪೂರಕವಾಗಿರುತ್ತದೆ. ಪ್ರಸಕ್ತ ಯೋಜನೆಯನ್ನು ಕಾರ್ಯಗತಗೊಳಿಸಿದಲ್ಲಿ ಅಂದಾಜು 1000 ಫಲಾನುಭವಿಗಳಿಗೆ ಪ್ರಯೋಜನವಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (155) 104
ಸದಸ್ಯರ ಹೆಸರು : ಶ್ರೀ ನಾಯ್ಡು ಜೆ.ಡಿ. (ಭಟ್ಕಳ)
ಉತ್ತರಿಸುವ ಸಚಿವರು : ಶ್ರೀ ಜೆ. ಕೃಷ್ಣ ಪಾಲೇಮಾರ್
ಮಾನ್ಯ ಬಂದರು. ಒಳನಾಡು ಜಲಸಾರಿಗೆ ಮತ್ತು ಪರಿಸರ ಹಾಗೂ. ಜೀವಿಶಾಸ್ತ್ರ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಭಟ್ಕಳ ವಿಧಾನಸಭಾ ವ್ಯಾಪ್ತಿಯ ಭಟ್ಕಳ ತಾಲ್ಲೂಕಿನ ಗೋಟೆಣ. ಭೇಳ್ಕೆ. ತೆಲಗೋಡ ತೆಂಗಿನ ಗುಂಡಿ. ಹೇಬ್ಬೆ. ಕ್ಯಾರಣೆ ಮತ್ತು ಮುರುಡೇಶ್ವರ ಹಾಗೂ ಹೊನ್ನಾವರ ತಾಲ್ಲೂಕಿನ ಮಂದೆಯ ನಾಕುದಾಮೊಹಲ್ಲಾ ಮಡಿ ಹಾಗೂ ಕಾಸರಗೋಡಿನಲ್ಲಿ ಸಮುದ್ರದ ನೀರು ಒಳನುಗ್ಗಿ ಆಸ್ತಿ–ಪಾಸ್ತಿ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು
ಆ)	ಹಾಗಿದ್ದಲ್ಲಿ ಎಂದಿನಿಂದ ಸಮುದ್ರ ತಡೆಗೋಡೆ ಕಟ್ಟಲಾಗುವುದು?	ಮಳೆಗಾಲದಲ್ಲಿ ತೀವ್ರ ಸಮುದ್ರ ಕೊರೆತ ಸಂಭವಿಸಿದ ಪ್ರದೇಶಗಳಲ್ಲಿ ತುರ್ತು ಸಂರಕ್ಷಣಾ ಕ್ರಮವಾಗಿ ಜಿಲ್ಲಾಧಿಕಾರಿಯವರು ನೀಡುವ ಪ್ರಾಕೃತಿಕ ವಿಕೋಪ ಪರಿಹಾರ ನಿಧಿಯಡಿ ತಾತ್ಕಾಲಿಕ ತುರ್ತು ಸಂರಕ್ಷಣೆ ಕೈಗೊಳ್ಳಲಾಗುತ್ತಿದೆ. ಪದೇ ಪದೇ ತೀವ್ರ ಸಮುದ್ರ ಕೊರೆತ ಉಂಟಾಗುವ ಭಟ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗೋರಟೆ. ಬೆಳಕೆ. ಮುಂಡಳ್ಳಿ. ತಲಗೋಡು. ಜಾಲಿ. ಹೊನ್ನಗದ್ದೆ. ಅಳ್ವಕೋಡಿ. ಸಣ್ಣಬಾವಿ. ಕಾಯ್ಕಿಣಿ. ಮತದಹಿತ್ಲು. ದೇವಗಿರಿ.

		ಮುರುಡೇಶ್ವರ. ಮಾವಳ್ಳಿ. ಬೈಲೂರು. ದೊಡ್ಡಗುಂದ. ಮಂಕಿ. ಕಾಸರಗೋಡು ಟೊಂಕ ಪ್ರದೇಶಗಳನ್ನು ಗುರುತಿಸಿದ್ದು. ಸದರಿ ಪ್ರದೇಶಗಳಲ್ಲಿ ತಜ್ಞರು ನೀಡಿರುವ ವಿನ್ಯಾಸದಂತೆ ತಡೆಗೋಡೆ ನಿರ್ಮಿಸಲು ಉದ್ದೇಶಿಸಲಾಗಿದ್ದು ಇದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾದ ರೂ. 291.76 ಕೋಟಿ ಅಂದಾಜಿನ (ರೂ. 601.00 ಕೋಟಿ ಪರಿಷ್ಕೃತ ಅಂದಾಜು) National Coastal Protection Project ಯೋಜನೆಯ ಪ್ರಸ್ತಾವನೆಯಲ್ಲಿ ಸೇರಿರುತ್ತದೆ. ಸದರಿ ಯೋಜನೆಗೆ Asian Development Bank ನಿಂದ ಸಹಾಯ ಪಡೆಯಲು ಕೇಂದ್ರ ಸರ್ಕಾರವು ಪರಿಶೀಲಿಸುತ್ತಿದೆ. ಅಲ್ಲದೆ ಲಭ್ಯವಿರುವ ರಾಜ್ಯ ಸರ್ಕಾರದ ಅನುದಾನಕ್ಕೆ ಅನುಗುಣವಾಗಿ ಅತಿ ತೀವ್ರವಾಗಿ ಸಮುದ್ರ ಕೊರೆತ ಉಂಟಾಗಿರುವ ಪ್ರದೇಶಗಳಲ್ಲಿ ಆದ್ಯತೆಯ ಮೇರೆಗೆ ವಿನ್ಯಾಸದಂತೆ ತಡೆಗೋಡೆ ನಿರ್ಮಿಸಲಾಗುತ್ತಿದೆ.